

# ಬದಲಾವಣೆ

ಹೇಳುತ್ತಿದ್ದ ನನ್ನ ತಾತ
ಇಲ್ಲಿತ್ತಂತೆ ದೊಡ್ಡ ತೋಟ
ನಿಮಗೇನಾದರೂ ಗೊತ್ತೆ
ನನ್ನ ಹಿರಿಯ ಕಂಡ ನೋಟ?

ಕೆರೆಯಿತ್ತಂತೆ, ಝರಿಯಿತ್ತಂತೆ
ಮರ, ಗಿಡಗಳ ಕಾಡ ತುಂಬಾ
ಮೊಲವಿತ್ತಂತೆ, ನರಿಯಿತ್ತಂತೆ
ಮೇಯುವ ಹಸುಗಳ ಅಂಬಾ

ನೆಲವು ಈಗ ಮೆತ್ತಗಿಲ್ಲ
ಕೆಂಪಿಟ್ಟಿಗೆ, ಕರೀ ಟಾರು
ನಮಗೋ ಓಡಾಡಿ ಗೊತ್ತಿಲ್ಲ
ಬರ್ ಎನ್ನುವ ಬಸ್ಸು, ಲಾರಿ, ಕಾರು

ತಿನ್ನಲು ಹುಲ್ಲಿನೆಳೆಯೂ ಸಿಗದು
ಕುಡಿಯಲು ಇಲ್ಲ ನೀರು
ಬಿಸಿಲು ಸುಡುತಿದೆ, ಮಳೆಯೂ ಬರದು
ಒಣಗಿದೆ ಗಿಡಗಳ ಬೇರು

ನಿಮಗೇನಾದ್ರೂ ಗೊತ್ತಾ ಸ್ವಾಮಿ
ಹಸಿರು ತಂಪಿನ ಊರು?
ನೀವೂ ಹೊರಟಿದ್ದರೆ ಹೇಳೀ ಸ್ವಾಮಿ
ನಾನೂ ಹತ್ತುವೆ ಕಾರು

● **ಸೌಮ್ಯಶ್ರೀ ಗೋಣೀಬೀಡು**

# ಬಿನ್ನಹ

ಎಲ್ಲಿಗೆ ಹೋಗುವಿರಿ ಅಣ್ಣಗಳಿರಾ
ಕಾರಿನ ಗಾಜಿಳಿಸಿ ಸುತ್ತ ನೋಡಿ

ಕಾಡು ನಾಡಾಗಿದೆ ಬೋಳು ಬಯಲು
ಎಲ್ಲಿ ನೋಡಿದರಲ್ಲಿ ಕಾಂಕ್ರೀಟ್ ರಸ್ತೆ

ನಾ ತಿಂಬ ಹಸಿರು ಸೊಪ್ಪು ಈಗೆಲ್ಲಿದೆ?
ಆಡು ಮುಟ್ಟದ ಸೊಪ್ಪಿಲ್ಲ ಎನ್ನುವರು
ತಿನ್ನುವುದಕ್ಕೆ ಇಲ್ಲಿ ಸೊಪ್ಪೇ ಇಲ್ಲ

ನಾ ಕೊಡುವ ಹಾಲು
ರೋಗ ನಿವಾರಕವಂತೆ
ಹಾಲನೀಯಲು ಹೊಟ್ಟೆ ತುಂಬಬೇಕಲ್ಲ

ದಿಕ್ಕು ಕಾಣದು ನನಗೆ,
ಒಡನಾಡಿಗಳೂ ಇಲ್ಲ
ಊರ ದಾರಿಯ ಹೇಳಿ
ಪಾರು ಮಾಡುವಿರಲ್ಲ
ಹಸಿರು ಕಾಣುವುದಿಲ್ಲ ಹಸಿವು ಕಾಣುತಿದೆ
ಆಡಿನ ಯಾಚನೆ ಮನವ ಕದಡುತಿದೆ.

● **ಮಮತಾ ಕೆ. ಮೂರ್ತಿ**